ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **393 /2022**

| | | |
|---|---|---|
| ಸಾಕ್ಷಿಯ ಹೆಸರು | : ಷರತ್ | ಸಿ.ಡಬ್ಲ್ಯು 2 |
| ತಂದೆಯ ಹೆಸರು | : ಗುರುಮೂರ್ತಿ | ಪಿ.ಡಬ್ಲ್ಯು 2 |
| ವಯಸ್ಸು | : 26 ವರ್ಷ | |
| ಉದ್ಯೋಗ | : ವ್ಯವಸಾಯ | |
| ವಾಸ ಸ್ಥಳ | : ಬೆಟ್ಟದಹಳ್ಳಿ | |

ದಿನಾಂಕ:**14-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ಚಾಸಾ-1 ನನ್ನ ಚಿಕ್ಕಪ್ಪನ ಮಗ. ಚಾಸಾ-3 ರಿಂದ 8 ರವರ ಪರಿಚಯ ಇದೆ. ಚಾಸಾ-1 ರವರ ತಂದೆ ದಿ:01-12-2021 ರಂದು ತೀರಿಕೊಂಡಿದ್ದರು. ಅವರಿಗೆ ದಿ:19-09-2021 ರಂದು ಸಂತೆ ದಿಬ್ಬದ ಬಳಿ ಅಪಘಾತ ಆಗಿತ್ತು. ಅಪಘಾತ ಆದ ದಿವಸ ನನ್ನ ಚಿಕ್ಕಪ್ಪ ಅವರ ಮೋಟಾರ್ ಸೈಕಲ್ ಮೇಲೆ ಸಂಜೆ 4-30 ರ ಸುಮಾರಿಗೆ ತೋಟದಿಂದ ಮನೆಯ ಕಡೆಗೆ ಹೋಗುತ್ತಿದ್ದರು. ಅಜ್ಜಂಪುರದ ಕಡೆಯಿಂದ ತರೀಕೆರೆಗೆ ಹೋಗುತ್ತಿದ್ದ ಆ್ಯಂಬುಲೆನ್ಸ್ ವೇಗವಾಗಿ ಬಂದು ನನ್ನ ಚಿಕ್ಕಪ್ಪನ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ. ನಾನು ಓಮಿನಿ ಕಾರಿನಲ್ಲಿ ಅವರ ಹಿಂದುಗಡೆಯೇ ಹೋಗುತ್ತಿದ್ದೆ. ನನ್ನ ಮತ್ತು ನನ್ನ ಚಿಕ್ಕಪ್ಪನ ವಾಹನದ ನಡುವೆ ಸುಮಾರು 50 ಅಡಿ ಅಂತರ ಇತ್ತು. ನನ್ನ ಚಿಕ್ಕಪ್ಪ ಹೊಟ್ಟೆ, ಬೆನ್ನುಮೂಳೆ ಮತ್ತು ಪಕ್ಕೆಗೆ ಗಾಯಗಳು ಆಗಿದ್ದವು. ನೀರು ಕುಡಿಸಿ ಅವರನ್ನು ನನ್ನದೇ ವಾಹನದಲ್ಲಿ ತರೀಕೆರೆಯ ಸರ್ಕಾರಿ ಆಸ್ಪತ್ರೆಗೆ ಸೇರಿಸಿದೆನು, ನನ್ನ ಜೊತೆ ಚಾಸಾ-1 ರವರು ಕೂಡ ಇದ್ದರು. ಅಲ್ಲಿಯ ವೈದ್ಯರ ಸಲಹೆ ಮೇರೆಗೆ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ 15 ದಿನಗಳು ಚಿಕಿತ್ಸೆ ಕೊಟ್ಟರು ನಂತರ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಉಡುಪಿಯ ಆದರ್ಶ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ಚಿಕಿತ್ಸೆ ಫಲಕಾರಿ ಆಗದೇ ದಿ:01-12-2021 ರಂದು ಅವರು ತೀರಿಕೊಂಡರು. ಅಪಘಾತಪಡಿಸಿದ ನಂತರದಲ್ಲಿ ಆ್ಯಂಬುಲೆನ್ಸ್ ವಾಹನ ನಿಲ್ಲಿಸದೇ ವೇಗವಾಗಿ ಹೋಯಿತು. ಚಾಸಾ-1 ಈ ಬಗೆ ದೂರನ್ನು ಕೊಟ್ಟಿರುತ್ತಾರೆ. ಸ್ಥಳ ಪಂಚನಾಮೆಯ ಮೇಲೆ ನನ್ನ ಸಹಿ ಇದೆ. ಅದನ್ನು ನಿ.ಪಿ-6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು. ಅಪಘಾತದ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿದ್ದೇನೆ. ಆ ಸಮಯದಲ್ಲಿ ಚಾಸಾ-3 ಮತ್ತು 4 ಕೂಡ ಇದ್ದರು. ಭಾವಚಿತ್ರವನ್ನು ನಿ.ಪಿ-7 ಎಂದು ಗುರುತಿಸಲಾಯಿತು. ಅಪಘಾತಪಡಿಸಿದ ಆ್ಯಂಬುಲೆನ್ಸ್ ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ಸೇರಿದೆ ಎಂದು ನನಗೆ ನಂತರ ಗೊತ್ತಾಯಿತು. ಅಪಘಾತಪಡಿಸಿದ ಆ್ಯಂಬುಲೆನ್ಸ್ ಚಾಲಕ ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ. ಆತನ ಕಾರಣದಿಂದಲೇ ಅಪಘಾತ ಆಗಿದೆ ಮತ್ತು ಆತನೇ ನನ್ನ ಚಿಕ್ಕಪ್ಪನ ಸಾವಿಗೆ ಕಾರಣ ಇರುತ್ತಾನೆ. ನಿ.ಪಿ-3 ಮತ್ತು 4 ರಲ್ಲಿ ಕಾಣಿಸುವ ವಾಹನಗಳ ಮಧ್ಯೆ ಅಪಘಾತ ಆಗಿದೆ.

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:

ಸಂತೆದಿಬ್ಬ, ಹೊಸೂರಿನಿಂದ ಅಜ್ಜಂಪುರದ ಕಡೆಗೆ ಹೋಗುವ ರಸ್ತೆಯಲ್ಲಿ ಬರುತ್ತದೆ. ಆ ಸ್ಥಳದಿಂದ 1 ಕಿ.ಮೀ ಅಂತರದಲ್ಲಿ ಬ್ರಿಡ್ಜ್ ಮತ್ತು ರಸ್ತೆ ತಿರುವು ಇದೆ ಎಂದರೆ ಸರಿ. ತರೀಕೆರೆ ಕಡೆಗೆ ಬರುವ ರಸ್ತೆಯಲ್ಲಿ ಕೂಡ ಸ್ವಲ್ಪ ದೂರದಲ್ಲಿ ರಸ್ತೆ ತಿರುವು ಇದೆ ಎಂದರೆ ಸರಿ. ಅಜ್ಜಂಪುರದಿಂದ ಸಂತೆದಿಬ್ಬದ ಕಡೆಗೆ ಬರಬೇಕಾದರೆ ರಸ್ತೆ ಏರುಮುಖವಾಗಿದೆ ಎಂದರೆ ಸಾಕ್ಷಿಯು ಅಪಘಾತ ಸ್ಥಳದಲ್ಲಿ ಇರುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ರಸ್ತೆ ತಿರುವು ಕೂಡ ಇದೆ ಎಂದರೆ ಸರಿಯಲ್ಲ. ಬಸ್ಸುನಿಲ್ದಾಣದಿಂದ ಅಜ್ಜಂಪುರದ ಕಡೆಗೆ ಸುಮಾರು 60-70 ಅಡಿ ದೂರದಲ್ಲಿ ಅಪಘಾತ ಆಗಿದೆ. ಸಾಮಾನ್ಯವಾಗಿ ಅಲ್ಲಿ ಜನಸಂಚಾರ ಇರುತ್ತದೆ ಎಂದರೆ ಸರಿಯಲ್ಲ. ಬಸ್ಸುನಿಲ್ದಾಣದ ಮಳಿಗೆ ದಿಬ್ಬದ ಬಳಿ ಇದೆ ಮತ್ತು ದೂರದಲ್ಲಿ ಇದೆ. ಅಪಘಾತಪಡಿಸಿದ ಆ್ಯಂಬುಲೆನ್ಸ್ ಸೈರನ್ ಹಾಕಿಕೊಂಡು ಬರುತ್ತಿತ್ತು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ದ್ವಿಚಕ್ರ ವಾಹನ ಟಾರ್ ರಸ್ತೆಯ ಮೇಲೆ ಇತ್ತು. ವಾಹನ ನಮ್ಮ ಚಿಕ್ಕಪ್ಪನ ಬಲಭಾಗಕ್ಕೆ ಬಂದು ಅಪಘಾತಪಡಿಸಿರುತ್ತದೆ. ಆ್ಯಂಬುಲೆನ್ಸ್ ನ ಮುಂದಿನ ಬಲಭಾಗಕ್ಕೆ ಡ್ಯಾಮೇಜ್ ಆಗಿರಬಹುದು. ನನ್ನ ಚಿಕ್ಕಪ್ಪನ ವಾಹನಕ್ಕೆ ಆ್ಯಂಬುಲೆನ್ಸ್ ನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಿ.ಪಿ-4 ರಲ್ಲಿ ಕಾಣಿಸುವ ಆ್ಯಂಬುಲೆನ್ಸ್ ಗೆ ಸರಿಯಾಗಿ ಮಧ್ಯದಲ್ಲಿ ಡ್ಯಾಮೇಜ್ ಆಗಿದೆ ಎಂದರೆ ಸರಿ.

2. ನನ್ನ ಚಿಕ್ಕಪ್ಪನಿಗೆ ವಾಹನ ಚಾಲನೆ ಮಾಡಲು ಪರವಾನಗೆ ಇತ್ತು. ನನ್ನ ಚಿಕ್ಕಪ್ಪನ ವಾಹನದ ಮುಂದಿನ ಚಕ್ರಕ್ಕೆ ನಿ.ಪಿ-3 ನ್ನು ನೋಡಿದಾಗ ಯಾವುದೇ ಡ್ಯಾಮೇಜ್ ಆಗಿಲ್ಲ ಎಂದರೆ ಸರಿ. ಎರಡೂ ವಾಹನಗಳ ಡ್ಯಾಮೇಜ್ ನೋಡಿದರೆ, ಎದುರುಬದರುನಿಂದ ಅಪಘಾತ ಆಗಿಲ್ಲ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ರೋಗಿಯನ್ನು ಕರೆದುಕೊಂಡು ಹೊಸದುರ್ಗದ ಕಡೆಯಿಂದ ಶಿವಮೊಗ್ಗದ ಕಡೆಗೆ ಸಂಚಾರಿ ನಿಯಮದಂತೆ ಆ್ಯಂಬುಲೆನ್ಸ್ ಹೋಗುತ್ತಿತ್ತು ಎಂದರೆ ಸರಿಯಲ್ಲ. ಸೈರನ್ ಹಾಕಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ್ಯಂಬುಲೆನ್ಸ್ ನಿಂದ ನನ್ನ ಚಿಕ್ಕಪ್ಪನ ವಾಹನಕ್ಕೆ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ವಿಮೆ ಹಣವನ್ನು ಪಡೆದುಕೊಳ್ಳಲು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಿ.ಪಿ-7 ರ ಪೋಟೋದಲ್ಲಿ ರಸ್ತೆ ತಿರುವು ಇದೆ ಎಂದರೆ ಸರಿ, ಅಪಘಾತ ಆದ ಬಗ್ಗೆ ನಾನು ತೋರಿಸುತ್ತಿರುವ ಸ್ಥಳದಲ್ಲಿ ಯಾವುದೇ ಕುರುಹುಗಳು ಇಲ್ಲಾ ಎಂದರೆ ಸರಿಯಲ್ಲ. ನಾನು ತೋರಿಸಿದ ಸ್ಥಳದಲ್ಲಿ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಮಹಜರ್ ಮಾಡಬೇಕಾದರೆ ಸಮಯ ಬೆಳಗ್ಗೆ 11-00 ರಿಂದ 11-30 ಆಗಿದ್ದಿರಬಹುದು. ಅಪಘಾತ ಆದ ದಿನದಂದು ದೂರನ್ನು ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಠಾಣೆಯಿಂದ ಸುಮಾರು ಅರ್ಧ ಕಿ.ಮಿ ಅಂತರದಲ್ಲಿ ಆಸ್ಪತ್ರೆ ಇದೆ ಎಂದರೆ, ಇರಬಹುದು. ಉದ್ದೇಶಪೂರ್ವಕವಾಗಿ ಅಪಘಾತ ಆದ ದಿವಸ ದೂರು ಕೊಟ್ಟಿಲ್ಲ ನಂತರ ಆ್ಯಂಬುಲೆನ್ಸ್ ನ್ನು ಸೇರಿಸಿಕೊಂಡು ಸುಳ್ಳು ಪಿರ್ಯಾದಿ ಕೊಡಲಾಗಿದೆ ಎಂದರೆ ಸರಿಯಲ್ಲ. ಆ್ಯಂಬುಲೆನ್ಸ್ ಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಯಾವುದೇ

ಅಪಘಾತವೇ ಆಗಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ನನ್ನ ಚಿಕ್ಕಪ್ಪ ಆಗಿರುವುದರಿಂದ ಅವರಿಗೆ ಪರಿಹಾರಧನವನ್ನು ಕೊಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.